Sri VEERENDRA PATIL (Chief Minister).—

(*a*) Three.

(*b*) Two.

(*c*) One.

(*d*) Two.

(*e*) One.

ಶ್ರೀ ಎಂ. ಎಂ. ಜೆ. ನಡ್ಯೋಜಾತ.—ಕೂಡ್ಲಿಗಿ ತಾಲ್ಲೂಕಿನಲ್ಲಿ ಉಂಟಾದ ಕೊಲೆಗಳ ಸಂಬಂಧದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ವೀರೇಂದ್ರ ಪಾಟೀಲ್.—ಮೂರು ಕೊಲೆಗಳು ಆಗಿವೆಯೆಂದು ವರದಿಯಾಗಿದೆ. ಎಷ್ಟು ಕೊಲೆಗಳು ಆಗಿವೆಯೋ ಅವುಗಳ ಬಗ್ಗೆ ಪೋಲೀಸಿನವರು ಸಾಧ್ಯವಾದಷ್ಟು ಕ್ರಮವನ್ನು ತೆಗೆದುಕೊಂಡು ಯಾರು ಕೊಲೆ ಮಾಡಿದ್ದಾರೋ ಅವರನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಇಷ್ಟು ಕೇಸುಗಳ ಪೈಕಿ ಯಾವುದಾದರೂ ಬಳ್ಳಾರಿ ಸೆಷನ್ಸ್ ಜಡ್ಜ್ ಕೋರ್ಟಿದಲ್ಲಿ ಡಿಸ್‌ಚಾರ್ಜ್ ಆಗಿದೆಯೇ ? ಅಥವಾ ಯಾವುದಾದರೂ ಕನ್‌ವಿಕ್ಷನ್ ಆಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಮೂರು ಕೇಸುಗಳ ಪೈಕಿ ಬಹುಶಃ ಒಂದು ಕೇಸು ಬಳ್ಳಾರಿ ಸೆಷನ್ಸ್ ಜಡ್ಜ್ ಕೋರ್ಟಿನಲ್ಲಿ ನಡೆದು ಅಕ್ವಿಟ್ ಆಗಿದೆಯೆಂದು ನನಗೆ ಗೊತ್ತಾಗಿದೆ.

Mr. SPEAKER.—Question hour is over. Now Short Notice Question No. 40 may be taken up.

SHORT NOTICE QUESTION AND ANSWER

Rehabilitation of Ceylonese in the State

40. Sri VATAL NAGARAJ (Chickpet).—

Will the Chief Minister be pleased to state :—

(*a*) whether the Minister of State for Food and Civil Supplies has stated recently that ten thousand people coming from Ceylon will be rehabilitated in Mysore State in Mangalore District;

(*b*) if so, whether the Government have visualised the difficulties to be faced by the people of this State in that behalf ?

Sri VEERENDRA PATIL (Chief Minister).—

(*a*) No.

(*b*) Does not arise.

ಶ್ರೀ ವಾಟಾಳ್ ನಾಗರಾಜ್.—(ಅ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ವೆಂದು ಹೇಳಿದೆ. ಒಂದು ಪತ್ರಿಕೆಯಲ್ಲಿ ಆ ರೀತಿ ವರದಿ ಬಂದಿರುವುದು ನಿಜವಲ್ಲವೇ ? ಯಾರೂ ಬರುವುದಿಲ್ಲವೆಂದು ನೀವು ಹೇಳುತ್ತೀರಿ. ಅವರು ಬರುವ ಉದ್ದೇಶವಾದರೂ ಇದೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದಾರೆ. 10 ಸಾವಿರ ಜನ ಬರುತ್ತಾರೆಂದು ಹೇಳಿದರೆ ಅವರಿಗೆ ಪುನರ್ವಸತಿ ಎಲ್ಲೆಲ್ಲಿ ಕೊಡುವುದು ? ಅದು ಕಷ್ಟ. ಕೆಲವು ಕುಟುಂಬದವರು ಇಲ್ಲಿಗೆ ಬರುತ್ತಾರೆಂಬ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಪಾತಾಳ್ ನಾಗರಾಜ್.—10 ಸಾವಿರ ಜನರು ಬಾರದಿದ್ದರೆ, ಇನ್ನೆಷ್ಟು ಸಾವಿರ ಜನ ಬರಬಹುದು, ಯಾವ ಉದ್ದೇಶ, ಕಾರಣಗಳಿಂದ ಬರುತ್ತಾರೆ ? ಇದರಿಂದ ಇಲ್ಲಿರುವ ಕನ್ನಡಿಗರಿಗೆ ನಿರುದ್ಯೋಗ ಸಮಸ್ಯೆ ಬರುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು. ನಮ್ಮ ರಾಷ್ಟ್ರದವರು ಮತ್ತು ಸಿಲೋನ್ ರಾಷ್ಟ್ರದವರು ಒಂದು ಕರಾರಿಗೆ ಬಂದಿದ್ದೇವೆ. ಆ ಅಗ್ರಿಮೆಂಟ್ ಪ್ರಕಾರ 5ಲಕ್ಷ 25ಸಾವಿರ ಜನರು ಅಲ್ಲಿಂದ ಬರುತ್ತಾರೆ. ಇಂಡೋ-ಸಿಲೋನ್ ಅಗ್ರಿಮೆಂಟ್ 1954ರಲ್ಲಿ ಆಯಿತು. ಜೂನ್ 1969ರಿಂದ ಅವರು ಬರುವುದಕ್ಕೆ ಪ್ರಾರಂಭವಾಗುತ್ತದೆ. ಕೇಂದ್ರಸರ್ಕಾರದವರು ಎಲ್ಲೆಲ್ಲಿ ಅವರು ನೆಲೆಗೊಳ್ಳುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ನೆಲೆಗೊಳ್ಳಲಿ ಎಂದು ಇತರ ರಾಜ್ಯ ಸರ್ಕಾರಗಳಿಗೂ ಬರೆದಿದ್ದಾರೆ. ಎಲ್ಲರೂ ಒಪ್ಪಿದ್ದಾರೆ. ನಮ್ಮ ಸ್ಟೇಟಿನವರು ಸುಮಾರು ಒಂದು ಸಾವಿರ ಕುಟುಂಬದವರಿಗೆ ಇಲ್ಲಿ ರಿಹ್ಯಾಬಿಲಿಟೇಟ್ ಮಾಡಬೇಕೆಂದಿದ್ದಾರೆ. ಅವರೆಲ್ಲರೂ ಪ್ಲಾಂಟೇಷನ್ ಏರಿಯಾದಿಂದ ಬಂದಿದ್ದಾರೆ. ಇಲ್ಲಿ ಪ್ಲಾಂಟೇಷನ್ ಏರಿಯಾ ಬಹಳವಾಗಿ ಇರುವುದರಿಂದ ಅವನ್ನು ಅಭಿವೃದ್ಧಿ ಮಾಡುವ ಉದ್ದೇಶದಿಂದ ಅವರನ್ನು ಕರೆಸುವುದಕ್ಕೆ ನಮ್ಮ ಸರ್ಕಾರ ಒಪ್ಪಿಕೊಂಡಿದೆ.

ಶ್ರೀ ಎಂ. ನಾಗಪ್ಪ.—ಆ ಒಂದು ಸಾವಿರ ಕುಟುಂಬದವರಿಗೆ ಇಲ್ಲಿ ಇರಲಿಕ್ಕೆ ಸ್ಥಳವನ್ನು ನೀವೇ ಕೊಡುತ್ತೀರೋ ಅಥವಾ ಬೇರೆಬೇರೆ ಸ್ಥಳಗಳಲ್ಲಿಡುವುದಕ್ಕೆ ಕೇಂದ್ರ ಸರ್ಕಾರದಿಂದ ನಿಮಗೆ ಸಹಾಯ ದೊರಕುತ್ತದೊ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ನಾನು ಹೇಳಿದೆ, ಸುಳ್ಯದಲ್ಲಿ ರಬ್ಬರ್ ಪ್ಲಾಂಟೇಶನ್ ಇದೆ. ಈಗಾಗಲೇ ಸ್ವಲ್ಪ ಅಭಿವೃದ್ಧಿ ಮಾಡಿದ್ದಾರೆ. ಇನ್ನೂ 8 ಸಾವಿರ ಎಕರೆ ಅಭಿವೃದ್ಧಿ ಮಾಡಬೇಕೆಂದು ಇದೆ. ಅದಕ್ಕೆ ಅಲ್ಲಿ ಅವರನ್ನು ರಿಹ್ಯಾಬಿಲಿಟೇಟ್ ಮಾಡಬೇಕೆಂದು ಇದೆ. ಕೇಂದ್ರ ಸರ್ಕಾರದಿಂದ ಇವಕ್ಕೆ ಎರಡು ಕೋಟಿ 75ಲಕ್ಷ ರೂಪಾಯಿ ಸಬ್ಸಿಡಿ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸಿಂಹಳದಿಂದ ಬರತಕ್ಕ ಒಂದು ಸಾವಿರ ಜನಕ್ಕೆ ಇಲ್ಲಿ ರಿಹ್ಯಾಬಿಲಿಟೇಟ್ ಮಾಡುತ್ತೀರಿ ಎಂದು ಹೇಳುತ್ತೀರಿ. ನಮ್ಮ ದೇಶದಲ್ಲಿ ಇಪ್ಪತ್ತು ಸಾವಿರಾರು ಕುಟುಂಬಗಳು, ಉಳಲಿಕ್ಕೆ ಭೂಮಿ ಇಲ್ಲದೆ, ಇರುವುದಕ್ಕೆ ಮನೆ ಇಲ್ಲದೆ ಇವೆ. ಅವರಿಗೆ ಮೊದಲು ಭೂಮಿ ಕೊಟ್ಟು ವಸತಿ ಸೌಕರ್ಯ ಕೊಡುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿರತಕ್ಕಂತಹ ಎರಡುವರೆ ಕೋಟಿ ಜನರಿಗೆ ಎಲ್ಲಾ ಸೌಕರ್ಯ ಒದಗಿಸಿ, ಇವರಿಗೆ ಪುನರ್ವಸತಿ ಮಾಡುವುದೆಂದರೆ, ಬಹುಶಃ ಇನ್ನೂ 50 ವರ್ಷದ ಮೇಲೆ ಹೋಗಬಹುದು. ಆದ್ದರಿಂದ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗಾಗಲೇ ನಮ್ಮ ರಾಜ್ಯದಲ್ಲಿ ಟಿಬೇಟಿಯನ್ ರಿಫ್ಯೂಜೀಸ್ ಇದ್ದಾರೆ. ಇದಲ್ಲದೆ, ಬೇರೆ ಇನ್ನೂ ಸಿಲೋನಿನಿಂದ ಬಂದವರನ್ನೂ ತೆಗೆದುಕೊಳ್ಳಬೇಕೆಂದು ಯೋಜನೆ ಮಾಡುತ್ತಿದ್ದೀರಿ. ಇವರು ಇರುವಾಗಲೇ ಈಗ ಏಳಕ್ಕೆ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಇವರನ್ನು ತಮಿಳ್‌ನಾಡಿನವರೂ ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—5ಲಕ್ಷ 25ಸಾವಿರ ಜನರನ್ನೂ ಬಂದು ರಾಜ್ಯದಲ್ಲಿ ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಇಲ್ಲಿಗೆ ಬರುವವರು ಪ್ಲಾಂಟೇಶನ್‌ನಲ್ಲಿರುವ ಸ್ಕಿರ್ಡ್ ಕೆಲಸಗಾರರು. ಅವರಿಗೆ ಮಾತ್ರ ಇಲ್ಲಿ ಅವಕಾಶ ಮಾಡಿಕೊಡುತ್ತೇವೆ. ಅವರಿಗೆ ಪುನರ್ವಸತಿ ಕಲ್ಪಿಸುವುದಕ್ಕೋಸ್ಕರ ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯ ಸರ್ಕಾರದವರ ಒಪ್ಪಿಗೆಯನ್ನು ಕೇಳಿದ್ದಾರೆ. ಎಲ್ಲರೂ ವಹಿಸಿಕೊಂಡಂತೆ ನಾವೂ ವಹಿಸಿಕೊಂಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಬರುವಂತವರು ಎಲ್ಲರೂ ಬರೇ ರಬ್ಬರ್ ಪ್ಲಾಂಟೇಶನ್‌ನಲ್ಲಿ ಕೆಲಸ ಮಾಡುತ್ತಾರೋ, ಅಥವಾ ಕಾಫಿ, ಟೀ ಪ್ಲಾಂಟೇಶನಿನಲ್ಲೂ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನನಗನಿಸುತ್ತದೆ, ಅವರೆಲ್ಲರೂ ರಬ್ಬರ್ ಪ್ಲಾಂಟೇಶನಿಂದ ಬರುವವರು, ಅವರನ್ನು ರಬ್ಬರ್ ಪ್ಲಾಂಟೇಶನಿನಲ್ಲಿ ರಿಹ್ಯಾಬಿಲಿಟೇಟ್ ಮಾಡಬೇಕೆಂಬ ವಿಚಾರ ಇದೆ.

Mr. SPEAKER.—Now next question.

Shiva Sena havocs in Bombay

58. Sri K. H. SRINIVASA (Sagar).—

Will the Chief Minister be pleased to state :—

(*a*) whether any reply has been received by him to the letters he had addressed to the Hon'ble Chief Minister of Maharashtra and the Prime Minister of India regarding recent Shiva Sena havocs ;

(*b*) if so, what is the damage done to the life and property of Kannadigas in Bombay according to the letters ;

(*c*) whether Maharashtra Chief Minister and the Prime Minister have assured about prompt and full compensation to those who have suffered ;

(*d*) whether they have also assured suitable action to curb Shiva Sena activities in Bombay ?

Sri VEERENDRA PATIL (Chief Minister).—

(*a*) Yes.

(*b*) Details not furnished.

(*c*) No.

(*d*) The Chief Minister, Maharashtra has written to say that police have orders to do their very best to give protection all round.

ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ದೇಶದ ಪ್ರಧಾನ ಮಂತ್ರಿ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ ಬರೆದಿರತಕ್ಕ ಪತ್ರದಲ್ಲಿ ಮುಂಬಯಿಯಲ್ಲಿರುವ ಕನ್ನಡಿಗರ ಜೀವ ಹಾಗೂ ಆಸ್ತಿ-ಪಾಸ್ತಿಗಳಿಗೆ ಆಗಿರುವ ಹಾನಿ ಎಷ್ಟು, ಮತ್ತು ಅವರಿಗೆ ಪರಿಹಾರವನ್ನು ಕೊಡತಕ್ಕ ಬಗ್ಗೆ ಯಾಗಲಿ, ಶಿವಸೇನೆಯ ಚಟುವಟಿಕೆಗಳನ್ನು ಹತ್ತಿಕ್ಕಲು ಏನಾದರೂ ಭರವಸೆಯನ್ನು ಕೊಡು ತಾ ?ರೆಯೇ ಎಂದು ಕೇಳಿದ್ದಕ್ಕೆ, ಭರವಸೆಯನ್ನು ಕೊಟ್ಟಿಲ್ಲವೆಂದು ಹೇಳಿದ್ದೀರಿ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಪ್ರತಿಕ್ರಿಯೆ ಏನು ? ಮತ್ತು ಅಲ್ಲಿರುವ ಕನ್ನಡಿಗರ ಹಿತಾಸ ?ಗಳನ್ನು ರಕ್ಷಿಸಲು ಮತ್ತು ಶಿವಸೇನೆಯ ಚಟುವಟಿಕೆಗಳನ್ನು ಹತ್ತಿಕ್ಕಲು ಯಾವ ಕಾರ್ಯಕ್ರಮ ಕೈಗೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀರ್.—ಮಾಹಾರಾಷ್ಟ್ರದ ಮುಖ್ಯಮಂತ್ರಿಯವರು ಉತ್ತರದಲ್ಲಿ ಹೇಳಿದ್ದಾರೆ, ಈ ರೀತಿ ಅನಾಹುತವಾಗದಂತೆ, ಸಂಭವಿಸದಾರದಂತೆ, ಈಗಾಗಲೇ ಪೋಲೀಸ್ ಅಧಿಕಾರಿಗಳಿಗೆ ಆದೇಶ ನೀಡಿದ್ದೇವೆ ಎಂದು. ಮತ್ತು ಕಾಂಪೆನ್‌ಸೇಶನ್ ಬಗ್ಗೆ ನಾನು ಪ್ರಧಾನ ಮಂತ್ರಿಯವರಿಗೆ ಬರೆದುದಕ್ಕೆ, ಆ ತರಹ ಸಿವಿರ್ ಡಿಸ್ಟರ್ಬೆನ್ಸಿಗೆ ಕಾಂಪೆನ್ಸೇಶನ್ ಕೊಡುವುದಕ್ಕಾಗುವುದಿಲ್ಲ. ಆದರೆ ಎಕ್ಸ್‌ಗ್ರೇಶಿಯೂ ರಿಲೀಫ್ ಕೊಡುವುದಕ್ಕೆ ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿಯವರಲ್ಲಿ ವಿಚಾರ ಮಾಡುತ್ತಿದ್ದೇನೆ, ನಮಗೆ ಏನಾದರೂ ಪ್ರಧಾನಮಂತ್ರಿಯ ರಿಲೀಫ್ ಫಂಡಿಂದ ಬೇಕಾದರೆ ಕೇಳಿ, ಎಂದು ನನಗೆ ಪತ್ರದಲ್ಲಿ ಸೂಚಿಸಿದ್ದಾರೆ.